# ಇದೆಲ್ಲಿಂದೆಲ್ಲಿಯ ಸಂಬಂಧವಯ್ಯಾ!

ಆಸ್ಟ್ರಿಯಾದ ರಾಜಧಾನಿ ಇನ್ಸ್‌ಬ್ರಕ್‌ನ ಸಮೀಪದ ವಾಟನ್ಸ್‌ನ ಜಗತ್ಪ್ರಸಿದ್ಧ ಸ್ವರೋವ್ಸ್ಕಿ ಕ್ರಿಸ್ಟಲ್‌ವರ್ಲ್ಡ್ ಮ್ಯೂಸಿಯಂನಲ್ಲಿ ಹದಿನಾಲ್ಕು ಚೇಂಬರ್‌ಗಳಲ್ಲಿ ವಜ್ರಾಭರಣಗಳನ್ನು ಪ್ರದರ್ಶಿಸಲಾಗಿದೆ. ಇಲ್ಲಿನ 'ಬ್ಲೂ ಹಾಲ್'ನಲ್ಲಿ 'ಚೇತಕ್' ಎಂಬ ಭಾರತೀಯ ಹೆಸರಿನ ಕುದುರೆ ವಜ್ರಾಭರಣಗಳನ್ನು ಹೊತ್ತು ಕೆನೆವ ಭಂಗಿಯಲ್ಲಿ ನಿಂತಿರುವುದನ್ನು ನೋಡಬಹುದು.

ರಾಜತೇಜದಿಂದಲೇ ಕೆನೆವ ಭಂಗಿಯಲ್ಲಿರುವ ಈ ರಾಜತೇಜಿ ಮೇವಾಡದ ರಾಣಾ ಪ್ರತಾಪಸಿಂಹನದು. ಮೊಘಲರ ವಿರುದ್ಧದ ಆತನ ಹಳದಿ ಘಾಟಿನ ಯುದ್ಧದಲ್ಲಿ ಈ ಕುದುರೆ ತೋರಿದ ಶೌರ್ಯ, ಸ್ವಾಮಿನಿಷ್ಠೆ ಇಂದು ಇತಿಹಾಸ ಪ್ರಸಿದ್ಧ. ಈ ಯುದ್ಧದಲ್ಲಿ ರಾಣಾ ಪ್ರತಾಪನನ್ನು ಹೊತ್ತಿದ್ದ ಚೇತಕನ ಕಾಲಿಗೆ ಖಡ್ಗ ತಾಕಿ ಗಾಯವಾಗುತ್ತದೆ. ಆಗ ಚೇತಕ ರಕ್ತ ಸುರಿಸುತ್ತಲೇ ಒಡೆಯನನ್ನು ಹೊತ್ತು ಹೊಳೆ, ಗುಡ್ಡಗಳನ್ನು ದಾಟಿ ಓಡುತ್ತಾ ಆತನನ್ನು ಸುರಕ್ಷಿತ ಸ್ಥಳದಲ್ಲಿಳಿಸಿ ಪ್ರಾಣ ಬಿಡುತ್ತದೆ. ಮುಂದೆ ಪ್ರತಾಪಸಿಂಹ ಅದಕ್ಕೆ ಸ್ಮಾರಕ ನಿರ್ಮಿಸುತ್ತಾನೆ. ಮುಂದೆ ಕವಿತೆ, ಲಾವಣಿ, ಬರಹಗಳ ಮೂಲಕ ಈ ಪ್ರಸಂಗ ಎಲ್ಲೆಡೆಗೂ ಪ್ರಸಾರವಾಗುತ್ತದೆ. ಮೌಲ್ಯಕ್ಕಾಗಿ ಪ್ರಾಣ ತೆತ್ತು ಹುತಾತ್ಮನಾದ ಆ ಮೇವಾಡದ ಕುದುರೆ ಯೂರೋಪಿನ ಈ ಆಸ್ಟ್ರಿಯಾದಲ್ಲಿ ಇಷ್ಟು ಸುಂದರ ಸ್ಥಾನ ಪಡೆದಿರುವುದನ್ನು ನೋಡುವಾಗ 'ಇದೆಲ್ಲಿಂದೆಲ್ಲಿಯ ಸಂಬಂಧವಯ್ಯಾ' ಎನಿಸದಿರದು.

—ಕೆ.ಆರ್. ಉಮಾದೇವಿ ಉರಾಳ ತೀರ್ಥಹಳ್ಳಿ





# ನೈಸರ್ಗಿಕ ಜಾರುಬಂಡಿ

ಜಾರುಬಂಡಿ ಎಂದರೆ ಮಕ್ಕಳಿಗೆ ಎಲ್ಲಿಲ್ಲದ ಪ್ರೀತಿ. ಶಾಲೆ, ಉದ್ಯಾನಗಳಲ್ಲಿ ನಿರ್ಮಿಸಿರುವ ಜಾರು ಬಂಡಿಗಳಲ್ಲಿ ಜಾರುವ ಮಕ್ಕಳ ಖುಷಿಗೆ ಪಾರವೇ ಇರುವುದಿಲ್ಲ. ಇಲ್ಲೊಂದು ಜಾರು ಬಂಡಿ ನಿಸರ್ಗದಲ್ಲಿಯೇ ರೂಪುಗೊಂಡು ಮಕ್ಕಳಿಗೆ ಮೋಜಿನ ತಾಣವಾಗಿದೆ.

ಇಂಥದ್ದೊಂದು ಜಾರುಬಂಡಿ ಗದಗ ಜಿಲ್ಲೆ ಮುಂಡರಗಿಯ ಕನಕಪ್ಪನ ಗುಡ್ಡದಲ್ಲಿದೆ. ಸುಮಾರು ನೂರು ಮೀಟರ್‌ನಷ್ಟು ಉದ್ದವಿರುವ ಜಾರುಬಂಡಿಯಲ್ಲಿ ಮಕ್ಕಳು ದಿನನಿತ್ಯ ಜಾರಿ ಆನಂದ ಪಡುತ್ತಾರೆ. ಸುಮಾರು ವರ್ಷಗಳಿಂದ ಮಕ್ಕಳು ಜಾರುತ್ತಾ ಬಂದಿರುವುದರಿಂದ ಕಲ್ಲು ನುಣುಪಾಗಿದೆ. ಹಾಗಾಗಿಯೇ ಮಕ್ಕಳು ಮೇಲಿನಿಂದ ಕೆಳಗೆ ಅನಾಯಾಸವಾಗಿ ಇಲ್ಲಿ ಜಾರುತ್ತಾರೆ. ಹೊಸಬರಿಗೆ ಇದೊಂದು ಅಚ್ಚರಿಯ ಸರ್ಕಸ್!

—ಸಿದ್ದೇಶ್ ಸಣ್ಣಗಿರಿ ಕೊಟ್ಟೂರು

# ಮೋಹಕ ಬಲೆ

ಇದೇನಿದು ಹೊಸ ಹೆಸರೆಂದಿರಾ? ಹೌದು. ಇದು ಹೆಸರಿಗೆ ತಕ್ಕಂತೆಯೇ ಕೆಲಸ ಮಾಡುವ ಬಲೆ. ಕೃಷಿಕರಿಗೆ ಸದಾ ಒಂದಿಲ್ಲೊಂದು ಕೀಟದ ಹಾವಳಿ ತಪ್ಪಿದ್ದಲ್ಲ. ಅದನ್ನು ನಿವಾರಿಸಲು ಒಂದಿಲ್ಲೊಂದು ಉಪಾಯ ಹುಡುಕುವುದೂ ತಪ್ಪುವುದಿಲ್ಲ. ಇದು ಅಂತಹದೊಂದು.

ಪ್ರಪಂಚದಲ್ಲಿ ಮೋಹ ಎನ್ನುವುದು ಎಲ್ಲ ವಿಷಯಗಳಲ್ಲಿಯೂ ಇರುತ್ತದೆ. ಅದರಲ್ಲಿಯೂ ಗಂಡು ಹೆಣ್ಣಿನ ಮೋಹ ಹೊಸದೇನಲ್ಲ. ಇದನ್ನೇ ಬಳಸಿಕೊಂಡು ತಯಾರಿಸಿದ ಬಲೆ ಇದು. ಇದರ ಒಳಗೆ ಹೆಣ್ಣುಕೀಟದ ವಾಸನೆ ಬರುವಂತಹ ಬಿಸ್ಕೆಟ್ ಇಡುತ್ತಾರೆ. ಅದು ಆಕರ್ಷಣೆಯ ಜಾಲವನ್ನು ಬೀಸುತ್ತದೆ. ಅದು ಗಂಡು ಕೀಟಗಳನ್ನು ಆಹ್ವಾನಿಸುತ್ತದೆ. ಅವುಗಳನ್ನು ಹಾಳು ಮಾಡುತ್ತದೆ. ಅದರ ಆಸೆಗೆ ಗಂಡುಕೀಟಗಳೆಲ್ಲ ಹಾರುತ್ತ ಬಂದು ಇದರ ಒಳಗೆ ಬಿದ್ದು ಸಾಯುತ್ತವೆ.

ತರಕಾರಿ ಬೆಳೆಗಳಿಗೆ ಊಜಿನೊಣ ಎಂಬ ಕೀಟದ ಹಾವಳಿ ಹೆಚ್ಚು. ಇದನ್ನು ನಿಯಂತ್ರಿಸಲು ಈ ಮೋಹಕ ಬಲೆ. ಇಲ್ಲಿ ಕೃಷಿಕರ ಬೆಳೆ ಉಳಿಯುತ್ತದೆ. ಈ ಬಲೆ ಕಂಡುಬಂದದ್ದು ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನ ಮುಷ್ಟಿಗರಹಳ್ಳಿ ತೋಟದಲ್ಲಿ.

—ಎಂ.ಎ. ವೆಂಕಟೇಶ್, ದಾವಣಗೆರೆ

